11-00 AM

(ಸಭೆಯು 11 ಗಂಟೆ 08 ನಿಮಿಷಕ್ಕೆ ಪ್ರಾರಂಭವಾಯಿತು)

ಅಧ್ಯಕ್ಷರು : ಪ್ರಶ್ನೋತ್ತರವನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಕರ್ನಾಟಕದ ವಿದ್ಯುತ್ ಪರಿಸ್ಥಿತಿಯ ಬಗ್ಗೆ ಮಾನ್ಯ ಇಂಧನ ಸಚಿವರು ಒಂದು ಹೇಳಿಕೆಯನ್ನು ನೀಡುವರು, ನಂತರ ಪ್ರಶ್ನೋತ್ತರವನ್ನು ಆರಂಭಿಸೋಣ.

1. ಸಚಿವರ ಹೇಳಿಕೆ :

ವಿಷಯ : ಕರ್ನಾಟಕದ ವಿದ್ಯುತ್ ಪರಿಸ್ಥಿತಿಯ ಬಗ್ಗೆ ಮಾನ್ಯ ಇಂಧನ ಸಚಿವರ ಹೇಳಿಕೆ.

1. **ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :** ಮುಂಗಾರು ವಿಫಲವಾದ್ದರಿಂದ ಕರ್ನಾಟಕದಲ್ಲಿ ವಿದ್ಯುತ್ ಪರಿಸ್ಥಿತಿ ಅನಿಶ್ಚಿತವಾಗಿದೆ. ರಾಜ್ಯದ ಶೇಕಡ 60ಕ್ಕೂ ಹೆಚ್ಚಿನ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಜಲ ವಿದ್ಯುತ್ ಆಧಾರಿತವಾಗಿದ್ದು, ಲಿಂಗನಮಕ್ಕಿ, ಸೂಪಾ, ಮಾಣಿ ಜಲಾಶಯಗಳ ನೀರಿನ ಒಳಹರಿವನ್ನವಲಂಬಿಸಿದೆ. ಮೇಲ್ಕಂಡ ಮೂರು ಜಲಾಶಯಗಳ ಒಟ್ಟಾರೆ ವಿದ್ಯುತ್ ಲಭ್ಯತೆಯು ದಿನಾಂಕ: 22-07-2008 ರಲ್ಲಿದಂತೆ 1498 ದಶಲಕ್ಷ ಯೂನಿಟ್‌ಗಳಿದ್ದು, ಕಳೆದ ವರ್ಷ ಇದೇ ದಿನಕ್ಕೆ ಇದು 5666 ದಶಲಕ್ಷ ಯೂನಿಟ್‌ಗಳಾಗಿತ್ತು, ಇವರೆಡನ್ನು ಹೋಲಿಸಿದಾಗ, 4168 ದಶಲಕ್ಷ ಯೂನಿಟ್‌ಗಳಷ್ಟು ಕೊರತೆಯಾಗಿದೆ. ಜಲಾಶಯಗಳಲ್ಲಿ ನೀರಿನ ಮಟ್ಟವು ತುಂಬಾ ಕಡಿಮೆಯಾಗಿದ್ದರೂ ಸಹ ಈ ಜಲ ವಿದ್ಯುತ್ ಕೇಂದ್ರಗಳಿಂದ ಸರಾಸರಿ 40 ಮಿಲಿಯನ್ ಯೂನಿಟ್‌ಗಳನ್ನು ದಿನಂಪ್ರತಿ ಪಡೆಯಲಾಗುತ್ತಿದೆ. ಇದು ಸುಸ್ಥಿರ ಪರಿಸ್ಥಿತಿಯಲ್ಲ.

2. ರಾಜ್ಯದಲ್ಲಿ ದೈನಂದಿನ ವಿದ್ಯುತ್ ಬಳಕೆಯ ಪ್ರಮಾಣ ಏರುಗತಿಯಲ್ಲಿದೆ. 2008 ರ ಜುಲೈ ತಿಂಗಳ ಸರಾಸರಿ ಬಳಕೆಯು 116 ಮಿಲಿಯನ್ ಯೂನಿಟ್ ಆಗಿದ್ದು, ಕಳೆದ ವರ್ಷದ ಬಳಕೆ ಇದೇ ತಿಂಗಳಲ್ಲಿ ಪ್ರತಿ ದಿನ 99 ಮಿಲಿಯನ್ ಯೂನಿಟ್‌ನಷ್ಟಿತ್ತು. ದಿನವಹಿ ಆಧಾರದ ಮೇಲೆ ಇದು ಸುಮಾರು ಶೇಕಡ 16 ರಷ್ಟು ಏರಿಕೆಯಾಗಿದೆ. ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ

1470 ಮೆಗಾ ವ್ಯಾಟ್ ಉತ್ಪಾದನೆಯಾಗುತ್ತಿದೆ ಹಾಗೂ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರವು ಸದ್ಯದಲ್ಲೇ (500 ಮೆಗಾ ವ್ಯಾಟ್ ಸಾಮರ್ಥ್ಯದ) ಕಾರ್ಯಾರಂಭ ಮಾಡಲಿದೆ. ರಾಜ್ಯದಲ್ಲಿ ಹೆಚ್ಚಾಗಿ ವಿದ್ಯುತ್ ಬಳಕೆಯಾಗುತ್ತಿರುವ ಕಾರಣ ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ ಉತ್ಪಾದನೆಯಾಗುತ್ತಿರುವ ಸಾಮರ್ಥ್ಯವು ವಿದ್ಯುತ್ ಬೇಡಿಕೆಯನ್ನು ನೀಗಿಸಲು ಸಾಕಾಗುತ್ತಿಲ್ಲ.

3. ರಾಜ್ಯವು ಕೇಂದ್ರ ಉತ್ಪಾದನಾ ಘಟಕಗಳಿಂದ ಸುಮಾರು 1542 ಮೆಗಾ ವ್ಯಾಟ್ ವಿದ್ಯುತ್‌ನ್ನು ಪಡೆಯುತ್ತಿದೆ. ತಮಿಳುನಾಡು ರಾಜ್ಯವು ಒಟ್ಟು 3174 ಮೆಗಾ ವ್ಯಾಟ್ ಪಾಲು ಪಡೆಯುತ್ತಿದ್ದರೆ, ಆಂಧ್ರ ಪ್ರದೇಶವು ಒಟ್ಟು 2955 ಮೆಗಾ ವ್ಯಾಟ್ ಪಡೆಯುತ್ತಿದೆ. ಅಂದರೆ ಈ ರಾಜ್ಯಗಳು ಪಡೆಯುತ್ತಿರುವ ಪ್ರಮಾಣದ ಅರ್ಧದಷ್ಟನ್ನು ಮಾತ್ರ ನಮ್ಮ ರಾಜ್ಯವು ಪಡೆಯುತ್ತಿದೆ. ಈ ಬಗ್ಗೆ ಕೇಂದ್ರದ ಉತ್ಪಾದನಾ ಘಟಕಗಳಿಂದ, ರಾಜ್ಯದ ಪಾಲನ್ನು 3000 ಮೆಗಾ ವ್ಯಾಟ್‌ಗೆ ತಕ್ಷಣವೇ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಾವು ಮನವಿ ಮಾಡಿಕೊಂಡಿರುತ್ತೇವೆ.

4. ವಿದ್ಯುತ್ ಲಭ್ಯತೆಯನ್ನು ಹೆಚ್ಚಳಗೊಳಿಸುವ ಸಲುವಾಗಿ ನಾವು ಅಧಿಕ ವಿದ್ಯುತ್ ಲಭ್ಯವಿರುವ ಛತ್ತಿಸಗಡದಂತಹ ರಾಜ್ಯಗಳಿಂದ ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಮತ್ತು ಎನರ್ಜಿ ಎಕ್ಸಚೇಂಜ್‌ನಿಂದ ವಿದ್ಯುತ್ ಖರೀದಿಸಲು ಪ್ರಯತ್ನಿಸುತ್ತಿದ್ದೇವೆ. ಪಕ್ಕದ ರಾಜ್ಯಗಳಾದ ತಮಿಳುನಾಡು ಹಾಗೂ ಆಂಧ್ರ ಪ್ರದೇಶಗಳಲ್ಲಿ ಸಹ ವಿದ್ಯುತ್ ಅಭಾವ ಪರಿಸ್ಥಿತಿ ಇರುವ ಹಿನ್ನೆಲೆಯಲ್ಲಿ ಇಂಥಹ ವಿದ್ಯುತ್ ಖರೀದಿಯ ಸಾಧ್ಯತೆಗಳು ಸೀಮಿತವಾಗಿದೆ.

5. ವಿದ್ಯುತ್ ಅಭಾವದ ಪರಿಸ್ಥಿತಿಯನ್ನು ಕಳೆದವಾರ ರಾಜ್ಯ ಸಚಿವ ಸಂಪುಟಕ್ಕೆ ಮನವರಿಕೆ ಮಾಡಲಾಯಿತು ಮತ್ತು ಸಚಿವರ ಸಂಪುಟ ಉಪ ಸಮಿತಿಯನ್ನು ರಚಿಸಲಾಯಿತು. ತದ ನಂತರ ಉಪ ಸಮಿತಿಯು ಸಭೆ ಸೇರಿ ರಾಜ್ಯದ ವಿದ್ಯುತ್ ಪರಿಸ್ಥಿತಿಯನ್ನು ಅವಲೋಕಿಸಿತು. ಜಲಾಶಯಗಳ ನೀರಿನ ಮಟ್ಟವನ್ನು ಗಣನೆಗೆ ತೆಗೆದುಕೊಂಡು, **ದೈನಂದಿನ ವಿದ್ಯುತ್ ಬಳಕೆಯನ್ನು ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸುಮಾರು 100 ದಶಲಕ್ಷ ಯೂನಿಟ್‌ಗಳಿಗೆ ಸೀಮಿತಗೊಳಿಸಲು ನಿರ್ಧರಿಸಲಾಯಿತು.** ತತ್ಪರಿಣಾಮ ಜುಲೈ ಅಂತ್ಯದವರೆಗೆ

ಶೇಕಡ 20 ರಷ್ಟು ಹಾಗೂ ಆಗಸ್ಟ್ 2008 ರಲ್ಲಿ ಶೇಕಡ 25ರಷ್ಟು ಲೋಡ್‌ಶೆಡ್ಡಿಂಗ್ ಮಾಡುವುದು ಅನಿವಾರ್ಯವಾಗುತ್ತದೆ. ಸಚಿವ ಸಂಪುಟ ಉಪ ಸಮಿತಿಯು ಪ್ರತಿ 15 ದಿನಕ್ಕೊಮ್ಮೆ ವಿದ್ಯುತ್ ಪರಿಸ್ಥಿತಿಯನ್ನು ಅವಲೋಕಿಸುವುದು ಹಾಗೂ ಮುಂಗಾರು ಚುರುಕುಗೊಂಡ, ಜಲಾಶಯಗಳ ನೀರಿನ ಮಟ್ಟದಲ್ಲಿ ಸುಧಾರಣೆಯಾದ್ದಲ್ಲಿ ವಿದ್ಯುತ್ ಸರಬರಾಜನ್ನು ಪೂರ್ವಸ್ಥಿತಿಗೆ ತರಲಾಗುವುದು.

6. ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಕೇಂದ್ರದಲ್ಲಿರುವ ಯಂತ್ರೋಪಕರಣಗಳನ್ನು ಸುಸ್ಥಿತಿಯಲ್ಲಿ ಕಾಪಾಡಿಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಸೂಚಿಸಲಾಗಿದೆ ಹಾಗೂ ಬಳ್ಳಾರಿ ಶಾಖೋತ್ಪನ್ನ ಕೇಂದ್ರದಲ್ಲಿ ಕೂಡಲೇ ವಿದ್ಯುತ್ ಉತ್ಪಾದನೆ ಪ್ರಾರಂಭಿಸಲು ಸಹ ಸೂಚಿಸಲಾಗಿದೆ. ಕಲ್ಲಿದ್ದಲಿನ ಸಂಗ್ರಹವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಕರ್ನಾಟಕ ವಿದ್ಯುತ್ ನಿಗಮವು ಕಾರ್ಯಪ್ರವೃತ್ತವಾಗಿದೆ ಮತ್ತು ಕಲ್ಲಿದ್ದಲಿನ ಅಭಾವದಿಂದ ಶಾಖೋತ್ಪನ್ನ ವಿದ್ಯುತ್ ಘಟಕಗಳ ಕಾರ್ಯನಿರ್ವಹಣೆಗೆ ಅಡಚಣೆಯಾಗಲು ಅವಕಾಶ ನೀಡುವುದಿಲ್ಲ.

7. ರಾಜ್ಯದ ವಿದ್ಯುತ್ ಪರಿಸ್ಥಿತಿಯ ಬಗ್ಗೆ ನಾವು ತುಂಬಾ ಎಚ್ಚರದಿಂದ್ದೇವೆ ಹಾಗೂ ರಾಜ್ಯವು ಈ ಹಿಂದೆ ಇಂಥಹುದೇ ಪರಿಸ್ಥಿತಿಯನ್ನು ಹಲವಾರು ಬಾರಿ ಎದುರಿಸಿದೆ. ಈಗಲೂ ಸಹ ವಿದ್ಯುತ್ ಕೊರತೆಯ ಕಾರಣಗಳಿಂದ ಉಂಟಾಗಲಿರುವ ಕಷ್ಟಗಳನ್ನು ನಿವಾರಿಸಲು ನಾವು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಈ ಸದನದ ಮುಖಾಂತರ ಕರ್ನಾಟಕದ ಜನತೆಗೆ ಭರವಸೆ ನೀಡುವ ಸಲುವಾಗಿ ನಾನು ಈ ಹೇಳಿಕೆ ನೀಡುತ್ತಿದ್ದೇನೆ. ಮುಂಬರುವ ವಾರಗಳಲ್ಲಿ ಮುಂಗಾರು ಮಳೆ ತೀವ್ರಗೊಳ್ಳುವುದಾಗಿ ನಾವು ಬಹಳ ಆಶಾದಾಯವಾಕವಾಗಿದ್ದೇವೆ. ತಮ್ಮೆಲ್ಲರ ಬೆಂಬಲ ಮತ್ತು ಸಹಕಾರದಿಂದ ನಾವು ಈ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುವೆವೆಂಬ ನಂಬಿಕೆಯನ್ನು ನಾನು ಹೊಂದಿದ್ದೇನೆ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರೇ, 2–3 ಪ್ರಶ್ನೆಗಳು ವಿದ್ಯುತ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಇವೆ. ಆಗ ಅದರ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಹೆಚ್.ಡಿ. ರೇವಣ್ಣ : ಮಂತ್ರಿಗಳು statement ಮಾಡಿದ ಮೇಲೆ clarification ಕೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಸಿರಾ) : ಮಾನ್ಯ ಅಧ್ಯಕ್ಷರೆ, ವಾಸ್ತವವಾದ ಅಂಶವನ್ನು ಸಭೆಯ ಗಮನಕ್ಕೆ ತಂದಿರತಕ್ಕಂಥದ್ದು ಬಹಳ ಒಳ್ಳೆಯದು. ಪತ್ರಿಕೆಗಳಿಗೆ ಹೋಗುವುದಕ್ಕಿಂತ ಮುಂಚೆ ತಾವು ಇಲ್ಲಿ ಈ ಸಭೆಗೆ ತಿಳುವಳಿಕೆಯನ್ನು ಕೊಟ್ಟು ನಂತರ ತಾವು ಪತ್ರಿಕೆಗೆ ಹೋಗಿದ್ದರೆ ಬಹುಶಃ ಅದು ಹೆಚ್ಚು ಒಳ್ಳೆಯದಾಗುತ್ತಿತ್ತು ಎಂದು ನನ್ನ ಭಾವನೆ. ಆದರೆ ನೀವು ಏನೇ ಸಮಸ್ಯೆಗಳನ್ನು ಹೇಳಿದರೂ ಕೂಡ ಇವತ್ತು ಕರ್ನಾಟಕ ರಾಜ್ಯ ಕಗ್ಗತ್ತಲಿನಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಹಳ್ಳಿಗಳಲ್ಲಿ ಏನು ವ್ಯವಸ್ಥೆ ಇದೆ ಎಂದರೆ, ಎಂಟು ಗಂಟೆ ವಿದ್ಯುತ್ ಕೊಡತಕ್ಕಂಥದ್ದು ಅಲ್ಲ, ಎರಡು ಗಂಟೆಗಳ ಕಾಲ ಕೂಡ ಇವತ್ತು ಕರೆಂಟ್ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದರಲ್ಲೂ ಕೂಡ ಸಾಯಂಕಾಲದ ಹೊತ್ತು ಮತ್ತು ರಾತ್ರಿ ಹೊತ್ತು ಒಂದು ದಿನವೂ ಕೂಡ ಮಕ್ಕಳಿಗೆ ಓದುವುದಕ್ಕಾಗಲಿ ಇನ್ನೂಂದಕ್ಕೆ ಆಗಲಿ ಸಹಾಯ ಆಗತಕ್ಕಂತಹ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಹಳ್ಳಿಗಳ ಪರಿಸ್ಥಿತಿ ಏಕೆ ಪಟ್ಟಣಗಳಲ್ಲಿಯೂ ಅದೇ ಪರಿಸ್ಥಿತಿ ಆಗಿದೆ. ಬೆಂಗಳೂರಿನಲ್ಲಿ ಕೂಡ ಇವತ್ತು ವಿದ್ಯುಚ್ಛಕ್ತಿ ಸರಬರಾಜಾಗುತ್ತಿಲ್ಲ. ಆದರೆ ಇದನ್ನು ಸಮಸ್ಯೆಯಲ್ಲಿ ಹೇಳಿದರೆ ಪರಿಹಾರವಾಗುವುದಿಲ್ಲ. ಇದಕ್ಕೆ ನೀವು ಎಲ್ಲಾ ರೀತಿಯಾದ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಪ್ರಯತ್ನ ಎಂದರೆ, ಛತ್ತೀಸ್‌ಗಡದಿಂದ ವಿದ್ಯುಚ್ಛಕ್ತಿಯನ್ನು ಕೊಂಡುಕೊಳ್ಳತಥದ್ದನ್ನು ನಾವು ಮಾಡುತ್ತಿದ್ದೇವೆ. ಕೊರತೆ ಬಿದ್ದಂತಹ ಸಂದರ್ಭದಲ್ಲಿ ಬೇರೆ ರಾಜ್ಯಗಳಿಂದ ಕೊಂಡುಕೊಳ್ಳುವುದು, ಅದೇ ರೀತಿ ಮಹಾರಾಷ್ಟ್ರದಿಂದ ಮತ್ತು ಬೇರೆ ಬೇರೆ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ಕೊಳ್ಳತಕ್ಕಂತಹ ಕೆಲಸವನ್ನು ಹಿಂದೆಯೂ ಕೂಡ ಮಾಡಿದ್ದೇವೆ. ಆದರೆ ಇವತ್ತು ಆ ರಾಜ್ಯಗಳಲ್ಲಿಯೂ ಕೂಡ ಇದೇ ರೀತಿಯ ಕೊರತೆ ಇರುವುದರಿಂದ ನಿಮಗೆ ವಿದ್ಯುಚ್ಛಕ್ತಿ ಸಿಗುವುದು ಕಷ್ಟವಾಗುತ್ತದೆ. ಉತ್ತರ ಭಾರತದ ಛತ್ತೀಸ್‌ಗಡ ಮತ್ತು ಬೇರೆ ಬೇರೆ ಭಾಗಗಳಲ್ಲಿ ವಿದ್ಯುಚ್ಛಕ್ತಿಯನ್ನು ಕ್ರೂಡೀಕರಿಸಿ ತರಿಸಕ್ಕಂತಹ ಪ್ರಯತ್ನವನ್ನು ಪ್ರಾಮಾಣಿಕವಾಗಿ ನೀವು ಮುಂದುವರೆಸಬೇಕೆಂದು ಒತ್ತಾಯನ್ನು ಮಾಡುವುದರ ಜೊತೆಗೆ ಕಲ್ಲಿದ್ದಲಿನ ನೆಪಕ್ಕೋಸ್ಕರ ರಾಯಚೂರಿನ 8ನೇ ಯೂನಿಟ್ ಪ್ರಾರಂಭವಾಗುವುದರಲ್ಲಿ ವಿಳಂಬವಾಗಿರುವುದನ್ನು ತಪ್ಪಿಸತಕ್ಕಂತಹ ಕೆಲಸವನ್ನು ಮಾಡಬೇಕು. ಇವತ್ತು ಅದರ inauguration ಗೋಸ್ಕರ ಕಾಯುತ್ತಿದ್ದೀರೋ ಏತಕ್ಕೋಸ್ಕರ ಕಾಯುತ್ತಿದ್ದೀರೋ ಗೊತ್ತಿಲ್ಲ. ಅದನ್ನು ಆದಷ್ಟು ಬೇಗ ಪ್ರಾರಂಭ ಮಾಡಬೇಕು ಮತ್ತು optimum production ಗೆ

ನೀವು ಹೋಗಬೇಕಾಗುತ್ತದೆ. ನಮ್ಮ ಯಾವುದೇ ಯೋಜನೆಗಳಿರಲಿ. ನಮ್ಮ ನದಿ ಮೂಲದಿಂದ ಹೈಡ್ರೋ Electric ನಿಂದ ಹೆಚ್ಚು ವಿದ್ಯುಚ್ಛಕ್ತಿಯನ್ನು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಆದರೆ ಬೇರೆ ಮೂಲಗಳಿಂದ ಬರುತ್ತಿರತಕ್ಕಂಥದ್ದಕ್ಕೆ optimum production ನಿಂದ 80 to 90% reach ಆದಾಗ ಮಾತ್ರ ನೀವು ಸ್ವಲ್ಪ ಮಟ್ಟಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಗ್ರಾಮೀಣ ಪ್ರದೇಶಗಳ ಬಗ್ಗೆ ಕಳಕಳಿ ಇರತಕ್ಕಂತಹವರು ತಾವು ಯೋಚನೆ ಮಾಡಬೇಕು. ರಾತ್ರಿ ಹೊತ್ತು ಕೊನೇ ಪಕ್ಷ 5 ರಿಂದ 6 ಗಂಟೆ ಆದರೂ ಕೂಡ ನಮಗೆ ಸಿಂಗಲ್ ಫೇಸ್ ಕೊಡತಕ್ಕಂಥದ್ದು ಮಾಡಬೇಕು. ಈಗಾಗಲೇ ಸಿಂಗಲ್ ಫೇಸ್ ಕೊಡುವುದಕ್ಕಾಗಿ ಹೊಸ ಹೊಸ system ಗಳನ್ನು ಅಳವಡಿಸತಕ್ಕಂತಹ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಕೆಲವು ಹೋಬಳಿ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಈಗಾಗಲೇ ಆ ಕೆಲಸ ನಡೆಯುತ್ತಿದೆ. ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಿ. ಇಡೀ ರಾಜ್ಯದಲ್ಲಿ ಎಲ್ಲಾ ಹಳ್ಳಿಗಳಿಗೂ ಕೂಡ ಸಿಂಗಲ್ ಫೇಸ್ ವಿದ್ಯುಚ್ಛಕ್ತಿ ಕೊಡುವುದು ಒಂದು, ಮತ್ತು three phase ಅಡಿಯಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡುವುದು, ಈ ರೀತಿ bifurcate ಮಾಡುವ ಕೆಲಸ ಮಾಡಿದರೆ, ನೀವು ಸ್ವಲ್ಪ ಮಟ್ಟಿಗೆ ಜನರ ಆಕ್ರೋಶವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕರೆಂಟ್ ಕೊಡುವುದಕ್ಕೆ ಕೂಡ ಸಾಧ್ಯವಾಗುತ್ತದೆ. ದಯಮಾಡಿ ನೀವು ಅದರ ಬಗ್ಗೆ ಚಿಂತನೆ ಮಾಡಬೇಕು. ಬಹುಶಃ ನನಗನ್ನಿಸುತ್ತದೆ ಮಾನ್ಯ ಈಶ್ವರಪ್ಪನವರೇ, ನಮ್ಮಲ್ಲಿರತಕ್ಕಂತಹ ಎಲ್ಲಾ sources ಗಳು ಕೂಡ exhaust ಆಗಿ ಹೋಗಿವೆ. ಇನ್ನು ಯಾವುದೇ ಮೂಲದಿಂದಲೂ ಕೂಡ ಹೈಡ್ರೋ ಎಲೆಕ್ಟ್ರಿಕ್ ಇರಬಹುದು, ವಿಂಡ್ ಏನರ್ಜಿ ಇರಬಹುದು, sugar cane ಮೂಲದಿಂದ ಬರತಕ್ಕಂತಹ ವಿದ್ಯುಚ್ಛಕ್ತಿ ಇರಬಹುದು, ಯಾವುದೇ ಮಾಡಿದರೂ ಕೂಡ ಒಂದು ಸಾವಿರ ಅಥವಾ ಎರಡು ಸಾವಿರ ಮೆ.ವ್ಯಾ. ಮೇಲೆ ತಾವು ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಸಾದ್ಯವೇ ಇಲ್ಲ. ಕಾರಣವೇನೆಂದರೆ, ನಮ್ಮ ಎಲ್ಲಾ sources exhaust ಆಗಿ ಹೋಗಿವೆ. ಬಹುಶಃ ನನಗನ್ನಿಸುತ್ತದೆ, ನಿನ್ನೆ ದೆಹಲಿಯಲ್ಲಿ ಆಗಿರತಕ್ಕಂತಹ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ನೀವು ಆದಷ್ಟು ನ್ಯೂಕ್ಲಿಯರ್ Power ಗೋಸ್ಕರ ಒತ್ತು ಕೊಡತಕ್ಕಂತಹ ಕೆಲಸವನ್ನು ಮಾಡಿದಾಗ ಮಾತ್ರ ಕರ್ನಾಟಕ ಕಗ್ಗತ್ತಲಿನಲ್ಲಿರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ನಿನ್ನೆಯ ಬೆಳವಣಿಗೆಗಳು ಏನೇ ಆಗಿರಲಿ ಆ ಪ್ರಶ್ನೆ ಬೇರೆ. ಆದರೆ ಅದರ ಸಹಾಯವನ್ನು ಪಡೆಯುವುದರಲ್ಲಿ ಕರ್ನಾಟಕ ಮುಂದಾಗಬೇಕು. ಇವತ್ತು ನೀವು ಒಂದು ಮಾತು ಹೇಳಿದಿರಿ. ಆಂಧ್ರಪ್ರದೇಶಕ್ಕೆ ಹೆಚ್ಚಿನ

ಪಾಲನ್ನು ಕೊಟ್ಟಿದ್ದಾರೆ. ಮುಂದಿನ ದಿನಗಳು ಅತ್ಯಂತ ಕರಾಳ ದಿನಗಳನ್ನು ನಾವು ಎದುರಿಸಬೇಕಾದಾಗ ಏನು ಮಾಡಬೇಕೆಂದು ನಾವು ಯೋಚನೆ ಮಾಡಬೇಕಾಗುತ್ತದೆ. ಆಂಧ್ರಪ್ರದೇಶಕ್ಕೆ ಮತ್ತು ತಮಿಳುನಾಡು ರಾಜ್ಯಗಳಿಗೆ ಏಕೆ ಹೆಚ್ಚಿನ allocation ಇದೆ, ನಮಗೆ ಕಡಿಮೆ ಇದೆ ಎಂದರೆ, ನ್ಯೂಕ್ಲಿಯರ್ ಪವರ್ ಅನ್ನು ಆ ರಾಜ್ಯದಲ್ಲಿ ಅಳವಡಿಸುವುದಕ್ಕೆ ಅವಕಾಶ ಕೊಟ್ಟಿದ್ದರಿಂದ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ದಯಮಾಡಿ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನೀವು ನ್ಯೂಕ್ಲಿಯರ್ ಪವರ್‌ಗೆ ಹೆಚ್ಚಿನ ಒತ್ತನ್ನು ಕೊಟ್ಟಂತಹ ಸಂದರ್ಭದಲ್ಲಿ ನಿಮಗೆ ಇರತಕ್ಕಂತಹ ಕೊರತೆ ಏನೆಂದರೆ, ಅಧ್ಯಕ್ಷರೆ, ಒಂದು ಮಾತನ್ನು ಹೇಳುತ್ತೇನೆ, ಇವತ್ತು ರಾಜ್ಯದ installed capacity ಎಷ್ಟಿದೆ ಎಂದರೆ, ಸುಮಾರು 9,000 ಮೆ.ವ್ಯಾ. ದಿಂದ 10,000 ಮೆ.ವ್ಯಾ. ಪವರ್ ಬೇಕಾಗುತ್ತದೆ. ನಮ್ಮಲ್ಲಿ ಉತ್ಪತ್ತಿ ಆಗುವುದು ಕೇವಲ 4,500 ಮೆ.ವ್ಯಾ. ಎಂದರೆ, 5000 ಮೆ.ವ್ಯಾ ಕೊರತೆಯನ್ನು ನೀವು ತುಂಬಬೇಕಾದರೆ, 50 ರಿಂದ 60,000 ಕೋಟಿ ರೂಪಾಯಿಗಳನ್ನು ನೀವು ತೊಡಗಿಸಬೇಕಾಗುತ್ತದೆ. ನಿಮ್ಮ ಯೋಜನೆ ಇದೆ, ನಿಮ್ಮ ಯೋಜನೆಯಲ್ಲಿ 10,000 ಮೆ.ವ್ಯಾ. ಗೆ ಹೋಗಬೇಕು ನಿಜ. ಅದಕ್ಕೆ ಮೂಲವಾದ ಹಣಕಾಸನ್ನು ಯಾವ ರೀತಿಯಾಗಿ ಒದಗಿಸುತ್ತೀರಿ ಎನ್ನತಕ್ಕಂಥದ್ದು ಕೂಡ ಬಹಳ ಮುಖ್ಯ ಇವತ್ತು ಕೊರತೆ ಬಿದ್ದಂತಹ ಸಂದರ್ಭದಲ್ಲಿ ನೀವು ಈ ಪರಿಸ್ಥಿತಿಯನ್ನು ಯಾವ ರೀತಿಯಾಗಿ ನಿಭಾಯಿಸುತ್ತೀರಿ ಎನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟವಾದ ವಿಚಾರವನ್ನು ಸಭೆಯ ಗಮನಕ್ಕೆ ತರಬೇಕೆಂದು ಹೇಳಿ, ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರನ್ನು ನಾನು ಅಭಿನಂದಿಸುತ್ತೇನೆ. ಅವರು ಕರೆಂಟ್ ಕಿತ್ತು ಹಾಕಿದ್ದಾರೆಂದು ನಾವು ದೂರುವುದಕ್ಕೆ ತಯಾರಿಲ್ಲ. ಆದರೆ ಇವತ್ತು ಮಾನ್ಯ ಇಂಧನ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ರಾಜ್ಯವು ಕೇಂದ್ರ ಉತ್ಪಾದನಾ ಘಟಕದಿಂದ 1542 ಮೆ.ವ್ಯಾ. ವಿದ್ಯುತ್ತ ಅನ್ನು ಪಡೆಯುತ್ತಿದೆ. ತಮಿಳುನಾಡು 3,174 ಮೆ.ವ್ಯಾ. ವಿದ್ಯುತ್ ಪಡೆಯುತ್ತಿದೆ, ಆಂಧ್ರ ಪ್ರದೇಶ 2,955 ಮೆ.ವ್ಯಾ. ವಿದ್ಯುತ್ ಪಡೆಯುತ್ತಿದೆ ಎಂದು ಹೇಳಿದರು. ಇದು ಯಾವತ್ತಿನಿಂದ? ಹೊಸದಾಗಿ ಏನಾದರೂ ಈಗಿನ ದಿನಗಳಲ್ಲಿ ಆಗಿದೆಯೋ ಅಥವಾ ಹಿಂದಿನ ದಿನಗಳಲ್ಲಿ ಆಗಿದೆಯೋ ಎನ್ನುವುದನ್ನು ನಮಗೆ ದಯಮಾಡಿ ತಿಳಿಸಬೇಕೆಂದು ಮನವಿ ಮಾಡುತ್ತೇನೆ. ಅದರ ಜೊತೆಗೆ ನಮ್ಮ ಮೂರು ಜಲಾಶಯಗಳು ಏನಿವೆ, ಲಿಂಗನಮಕ್ಕಿ

ಇರಬಹುದು, ವರಾಹಿ ಇರಬಹುದು ಅಥವಾ ಸೂಪ ಇರಬಹುದು, ಅದರಲ್ಲಿ ಎಷ್ಟು ನೀರಿದೆ, ಎಷ್ಟು ವಿದ್ಯುತ್ ಉತ್ಪಾದನೆ ಆಗಬಹುದು, ನೀರು ಖಾಲಿ ಆದರೆ ಮುಂದಿನ ದಿನಗಳಿಗೆ ಏನು ವ್ಯವಸ್ಥೆ ಮಾಡಿದ್ದೀರಿ, ಎನ್ನುವುದನ್ನು ತಾವು ಈ ಸಭೆಗೆ ತಿಳಿಸಬೇಕಾಗುತ್ತದೆ. ಮತ್ತೇ ಇವೊತ್ತಿನ ಹೇಳಿಕೆಯಲ್ಲಿಯೂ ಕೂಡ ನಮ್ಮ ರೈತರಿಗೆ ಉಚಿತ ವಿದ್ಯುತ್ ಅನ್ನು un-limit ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಾಗಿ ನಾನು ಕೇಳುವುದೇನೆಂದರೆ ನಮ್ಮ ರೈತರಿಗೆ ವಿದ್ಯುತ್ ಅನ್ನು ಎಷ್ಟು ಗಂಟೆ ಕೊಡುತ್ತೀರಿ? ಇನ್ನು ನಗರ ಪ್ರದೇಶಗಳಲ್ಲಿ, ಬೆಂಗಳೂರು ನಗರವಿರಬಹುದು, ಬೇರೆ ಬೇರೆ ನಗರಗಳಿರಬಹುದು, ಈ ನಗರಗಳಿಗೆ ಎಷ್ಟು ಗಂಟೆಗಳ ಕಾಲ ವಿದ್ಯುತ್ ಅನ್ನು ಕೊಡಬೇಕೆನ್ನುವ ಉದ್ದೇಶ ಸರ್ಕಾರಕ್ಕಿದೆ? ಈ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು. ಏಕೆಂದರೆ ಸದನದಲ್ಲಿ ಕೊಟ್ಟಿರುವ ಸಚಿವರ ಹೇಳಿಕೆಯಲ್ಲಿ ಈ ಬಗ್ಗೆ ಹೇಳಿಲ್ಲ. ಆದುದರಿಂದ ನಗರ ಪ್ರದೇಶಕ್ಕೆ ಎಷ್ಟು ಮತ್ತು ಗ್ರಾಮೀಣ ಪ್ರದೇಶಕ್ಕೆ ಎಷ್ಟು ಮತ್ತು ರೈತರಿಗೆ ಎಷ್ಟು ವಿದ್ಯುತ್ ಅನ್ನು ಕೊಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಈ ವಿದ್ಯುತ್ ಪೂರೈಕೆ ವಿಚಾರದಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆಯೋ ಅಥವಾ ರಾಜ್ಯ ಸರ್ಕಾರ ವಿಫಲವಾಗಿದೆಯೋ ಎಂಬ ಬಗ್ಗೆ ನಮಗೆ ಹೇಳಬೇಕು. ಏಕೆಂದರೆ ನಮಗೆ ಹಿಂದಿನ ದಿನಗಳಿಂದ ಇಂಧನ ಇಲಾಖೆಯ ಬಗ್ಗೆ ಏನಾಗಿದೆ ಎಂಬ ಬಗ್ಗೆ ಇವೊತ್ತು ನಮ್ಮ ಈಶ್ವರಪ್ಪನವರು ಇಷ್ಟೊಂದು ಸವಿಸ್ತಾರವಾಗಿ ಹೇಳಿದ್ದಾರೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ್ದೆಲ್ಲವನ್ನೂ ಹೇಳಿದ್ದಾರೆ. ಆದರೆ ರಾಜ್ಯ ಸರ್ಕಾರ ವಿದ್ಯುತ್ ಉತ್ಪಾದನೆ ಬಗ್ಗೆ ಮುಂದಿನ ದಿನಗಳಲ್ಲಿ ಏನು ಮಾಡುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರು ಈ ಸಭೆಗೆ ತಿಳಿಸಬೇಕಾಗುತ್ತದೆ ಎಂದು ನಾನು ಮನವಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿಪುರಂ) : ಮಾನ್ಯ ಅಧ್ಯಕ್ಷರೆ, ಇವೊತ್ತು ಇಂಧನ ಸಚಿವರು ಕೊಟ್ಟಿರುವ ಹೇಳಿಕೆಯನ್ನು ನೋಡಿದಾಗ ನಿಜವಾಗಿಯೂ ಗಾಬರಿಯಾಗುತ್ತದೆ ಮತ್ತು ಮನಸ್ಸಿಗೆ ನೋವಾಗುತ್ತದೆ.

ಅಧ್ಯಕ್ಷರು : ನರೇಂದ್ರಬಾಬುರವರೆ, ಕೇವಲ ಕ್ಲಾರಿಫಿಕೇಶನ್ ಕೇಳಿ. ಡಿಸ್‌ಕಶನ್ ಬೇಡ.

ಶ್ರೀ ನೆ.ಲ. ನರೇಂದ್ರಬಾಬು : ನೇರವಾಗಿ ನಾನು ವಿಷಯಕ್ಕೆ ಬಂದುಬಿಡುತ್ತೇನೆ. ಇವೊತ್ತು ವಿದ್ಯುತ್ ಕೊರತೆ ಇದೆ ಎಂಬುದನ್ನು ಮಾನ್ಯ ಸಚಿವರು ಹೇಳಿದ್ದಾರೆ. ಆದುದರಿಂದ ನಾನು ಒಂದು ವಿಷಯವನ್ನು ಹೇಳುವುದೇನೆಂದರೆ ಯಾರು ಯಾರು ಸೋಲಾರ್ ಸಿಸ್ಟಂ

ಅನ್ನು ಅಳವಡಿಸಿಕೊಂಡಿದ್ದಾರೋ ಅಂಥವರಿಗೆ ಸಬ್ಸಿಡಿಯ ರಿಯಾಯಿತಿ ಸೌಲಭ್ಯವನ್ನು ಒದಗಿಸುವುದಾಗಿ ನಮ್ಮ ವಿದ್ಯುತ್ ಸಚಿವರು ಒಂದು ಹೇಳಿಕೆಯನ್ನು ಸದನದಲ್ಲಿ ಕೊಡಬೇಕು. ಈ ಸೌಲಭ್ಯ ಹಿಂದೆ ಇತ್ತು. ಅದನ್ನು ಮುಂದುರೆಸುತ್ತಾರೆಯೇ ಎಂಬ ಬಗ್ಗೆ ಹೇಳಬೇಕು. ಇನ್ನು ಎರಡನೆಯದಾಗಿ ರಾಯಚೂರು ಪವರ್ ಪ್ಲಾಂಟ್‌ನಲ್ಲಿ ಅಲ್ಲಿಯ ಪವರ್ ಕಾರ್ಪೋರೇಷನ್‌ಗೆ ರಾಜ್ಯ ಸರ್ಕಾರ ಕೊಡಬೇಕಾಗಿರುವ 3 ಸಾವಿರ ಕೋಟಿ ಹಣವನ್ನು ಕೊಡಬೇಕಾಗಿದೆ. ಅದನ್ನು ಕೊಡದೇ ಇರುವುದರಿಂದ ಅದನ್ನು ನಡೆಸುವುದಕ್ಕೆ ಆಗುತ್ತಿಲ್ಲ ಎನ್ನುವ ವಿಚಾರವಿದೆ. ದಯವಿಟ್ಟು ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇನ್ನು ಇವೊತ್ತು ಇಡೀ ನಮ್ಮ ಬೆಂಗಳೂರು ನಗರ ಹಳ್ಳಿಯ ರೀತಿಯಾಗಿದೆ. ಬೆಳಿಗ್ಗೆ ಎದ್ದು ಮಕ್ಕಳನ್ನು ಶಾಲೆಗೆ ಕಳುಹಿಸಬೇಕಾದರೆ, ನೌಕರರು ಕಛೇರಿಗೆ ಬರಬೇಕಾದರೆ ಶುಚಿತ್ವಕ್ಕಾಗಿ ಗೀಸರ್ ಅನ್ನೂ ಆನ್ ಮಾಡುವುದಕ್ಕಾಗುತ್ತಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೂ ಆಗುತ್ತಿಲ್ಲ. ಸಂಪೂರ್ಣವಾಗಿ ವಿದ್ಯುತ್ ರೈತರಿಗೆ ಉಚಿತ ಎಂಬ ಹೇಳಿಕೆಯನ್ನು ಕೊಟ್ಟ ನಂತರ ಇವೊತ್ತು ಯಾವುದು ಉಚಿತ? ಕತ್ತಲೆ ಉಚಿತವೋ ಅಥವಾ ವಿದ್ಯುತ್ ಉಚಿತವೋ ಎನ್ನತಕ್ಕಂಥ ಸಂಶಯವನ್ನು ಬೆಳಿಗ್ಗೆ ಎದ್ದ ತಕ್ಷಣ ಮಹಿಳೆಯರು ಫೋನ್ ಮಾಡಿ ಕೇಳುತ್ತಾರೆ. ನಾಲ್ಕು ಗಂಟೆ, ಆರು ಗಂಟೆ, ಹೀಗೆ ವಿದ್ಯುತ್ ಪೂರೈಕೆ ನಿಲ್ಲುತ್ತಿದೆ. ಇದು ಎಕಾನಮಿ ಮೇಲೆ, ಸಣ್ಣ ಸಣ್ಣ ಕೈಗಾರಿಕೆಗಳ ಮೇಲೆ urcation repercussion ಆಗುತ್ತದೆ ಎಂಬ ಬಗ್ಗೆ ಯೋಚನೆ ಮಾಡಬೇಕು. ಈ ಬಗ್ಗೆ ಮಾನ್ಯ ಈಶ್ವರಪ್ಪನವರು ಏನಾದರೂ ಪರಿಹಾರವನ್ನು ಕಂಡುಹಿಡಿದೇ ಹಿಡಿಯುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ರೀತಿಯ ಹೇಳಿಕೆಯನ್ನು ಕೊಟ್ಟು ಟೋಟಲಿ ಸರೆಂಡರ್ ಆಗಿ ಏನು ಮಾಡುವುದು ಎನ್ನತಕ್ಕಂಥ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಚುನಾವಣಾ ಪ್ರಣಾಳಿಕೆಯನ್ನು ಪಕ್ಕಕ್ಕಿಟ್ಟು ಏನಾದರೂ ಮಾಡಿ ಪವರ್ ತರಬೇಕು. ಏಕೆಂದರೆ ಎಲ್ಲದಕ್ಕೂ ಪವರ್ ಬಹಳ ಮುಖ್ಯ ಪ್ರತಿಯೊಂದು ಪ್ರಗತಿಗೂ ಪವರ್ ಬಹಳ ಮುಖ್ಯ.

ಅಧ್ಯಕ್ಷರು : ಮಾನ್ಯ ನರೇಂದ್ರಬಾಬುರವರೆ, ಡಿಸ್‌ಕಶನ್ ಮಾಡುವುದಕ್ಕೆ ಅವಕಾಶವಿಲ್ಲ. ದಯವಿಟ್ಟು ನಾನು ನಿಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ Rules of Proceedure ನಲ್ಲಿ ಏನು ನಿಯಮವನ್ನು ಹೇಳಲಾಗಿದೆಯೋ ಆ ನಿಯಮದ ಪ್ರಕಾರ ನಾವು ಹೋಗಬೇಕಾಗುತ್ತದೆ. In the statement by the Minister: with the consent of the Speaker a Minisater may make a statement on the matter ಆದುದರಿಂದ ಮಂತ್ರಿಗಳ ಸ್ಟೇಟ್‌ಮೆಂಟ್ ಮೇಲೆ ಡಿಸ್‌ಕಶನ್ ಮಾಡುವುದಕ್ಕೆ ಅವಕಾಶವಿಲ್ಲ. ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಇಂದು ರಾಜ್ಯಾದ್ಯಂತ ವಿದ್ಯುತ್ ಸಮಸ್ಯೆ ಇರುವಾಗ ಮಾನ್ಯ ಸಚಿವರು ಏನು ಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಸದನದಲ್ಲಿ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇಲ್ಲಿ ಈ ರೀತಿಯ ಹೇಳಿಕೆಯನ್ನು ನೀಡಿರುವ ಉದ್ದೇಶವೇ ನನಗೆ ಅರ್ಥವಾಗಲಿಲ್ಲ. ಅಂದರೆ ಈ ರಾಜ್ಯದ ಜನತೆಗೆ ಒಂದು ಭಯಭೀತಿಯನ್ನು ಮಾಡಬೇಕೆನ್ನುವ ಉದ್ದೇಶವಿದೆಯೋ ಏನೋ ನನಗೆ ಗೊತ್ತಿಲ್ಲ. ಆದರೆ ಇದಕ್ಕೆ ನೀವು ಏನು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂಬ ಬಗ್ಗೆ ನಿರ್ದಿಷ್ಟ ಹೇಳಿಕೆಯನ್ನು ಕೊಟ್ಟಿಲ್ಲ. ಆದರೆ ಒಂದು ಸಲಹೆಯನ್ನು ಮಾನ್ಯ ಸಚಿವರಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈಗಾಗಲೇ ರೈತರಿಗೆ ಉಚಿತ ವಿದ್ಯುತ್‌ಅನ್ನು ಕೊಡುತ್ತೇವೆಂದು ನೀವು ಹೇಳಿದ್ದೀರಿ. ಆದರೆ ಯಾವಾಗ ಕೊಡುತ್ತೀರಿ ಮತ್ತು ಎಷ್ಟು ಕೊಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಏಕೆಂದರೆ ಈಗಾಗಲೇ ಹಿಂದಿನ ಸರ್ಕಾರವಿದ್ದಾಗಲೇ ಗ್ರಾಮೀಣ ಪ್ರದೇಶಗಳಿಗೆ 8 ಗಂಟೆಗಳ ವಿದ್ಯುತ್‌ಅನ್ನು ಕೊಡುತ್ತೇವೆಂದು ಕಮಿಟ್‌ಮೆಂಟ್ ಇತ್ತು. ಆದರೆ ಅದನ್ನು ರಾತ್ರಿ ಹೊತ್ತು ಕೊಡುತ್ತಿದ್ದಾರೆ. ಡೇ ಟೈಂನಲ್ಲಿ ನೀವು ಎಷ್ಟು ಥ್ರೀ–ಫೇಸ್ ಕರೆಂಟ್ ಕೊಡುತ್ತೀರಿ ಎನ್ನತಕ್ಕಂಥದ್ದು ರೈತರಿಗೆ ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ, ನಾವು ರಾತ್ರಿ 1 ಗಂಟೆಯಿಂದ ಬೆಳಿಗ್ಗೆ 4 ಗಂಟೆಯವರೆಗೆ ಥ್ರೀ–ಫೇಸ್ ಕರೆಂಟ್ ಕೊಡುತ್ತಿದ್ದೇವೆ ಎಂದು ಹೇಳಿ ಆ ರೀತಿಯಲ್ಲಿ ಕರೆಂಟ್ ಸಪ್ಲೈ ಮಾಡಿದರೆ ಅದು ಉಪಯೋಗ ಕೂಡ ಆಗುವುದಿಲ್ಲ. ಇದೊಂದು ವಿಚಾರ. ಇನ್ನೊಂದು ವಿಚಾರ ಎಷ್ಟು percentage of transmission loss ಆಗುತ್ತಿದೆ? ಇಂಧನ ಸಚಿವರಿಗೆ ಇದರ ಬಗ್ಗೆ ಗಮನವಿದೆಯೇ? ಯಾವ ಎಸ್ಕಾಂಗಳಲ್ಲಿ ಎಷ್ಟೆಷ್ಟು ನಿಮ್ಮ ಟ್ರಾನ್ಸ್‌ಮಿಶನ್ ಲಾಸ್‌ಅನ್ನು ಕಡಿತಗೊಳಿಸುವುದಕ್ಕೆ ನೀವು ಏನು ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ? These are all permanent measures which are to be taken to improve the existing efficiency. ಇದು ನಮಗೆ ಬಹಳ ಇಂಪಾರ್ಟೆಂಟ್. ಲೈನ್ ಲಾಸ್ ಪ್ರಿವೆಂಟ್ ಮಾಡುವುದಕ್ಕೆ ನೀವು ಏನು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುತ್ತಿದ್ದೀರಿ? ಎಲ್ಲೆಲ್ಲಿ 33 ಕೆ.ವಿ. ಸಬ್ ಸ್ಟೇಶನ್ಸ್, ಎಲ್ಲೆಲ್ಲಿ 110 ಕೆ.ವಿ. ಸಬ್ ಸ್ಟೇಶನ್ಸ್ ಅವಶ್ಯಕತೆ ಇದೆಯೋ

ಅಲ್ಲಿ ನೀವು ಮಾಡುತ್ತಿದ್ದೀರಿ? ಆ ಕಡೆಗೆ ನೀವು ಗಮನ ಕೊಟ್ಟರೆ ಇರತಕ್ಕಂಥ ಎನರ್ಜಿ ರಿಸೋರ್ಸ್‌ಸ್ ಅನ್ನು ನಾವು ಎಫೆಕ್ಟಿವ್‌ಲಿ ಯೂಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೆ, ಈಗ ವಿದ್ಯುತ್ ಪರಿಸ್ಥಿತಿ ಬಗ್ಗೆ ಮಾನ್ಯ ಸಚಿವರು ಅವರದ್ದೇ ಆದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ಬೇರೆ ರಾಜ್ಯಗಳಿಗೆ 3 ಸಾವಿರ, 2900 ಮೆಗಾವ್ಯಾಟ್ ವಿದ್ಯುತ್‌ಅನ್ನು ಕೊಡುತ್ತಿದ್ದಾರೆ. ಆದರೆ ಕರ್ನಾಟಕಕ್ಕೆ ಕೇವಲ 1500 ಮೆಗಾವ್ಯಾಟ್ ವಿದ್ಯುತ್‌ಅನ್ನು ಮಾತ್ರ ಕೊಡುತ್ತಿದ್ದಾರೆ ಎನ್ನತಕ್ಕಂಥದ್ದನ್ನು ಮಾನ್ಯ ಸಚಿವರು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ನಮಗೆ proportionate ಆಗಿ ಏನು ವಿದ್ಯುತ್ ಬರಬೇಕೋ ಮತ್ತು ಬೇರೆ ರಾಜ್ಯಗಳಿಗೆ proportionate ಆಗಿ ವಿದ್ಯುತ್‌ಅನ್ನು ಕೊಡುತ್ತಿದ್ದಾರೋ ಅದೇ ರೀತಿಯಾಗಿ ಪ್ರಪೋರ್ಶನೆಟ್ ಆಗಿ ವಿದ್ಯುತ್‌ಅನ್ನು ಕರ್ನಾಟಕಕ್ಕೂ ಕೊಡಬೇಕು ಎನ್ನುವುದು ನಿರ್ವಿವಾದ. ಅದನ್ನು ನಾವು ಕೇಳಲೇಬೇಕು ಮತ್ತು ಅದನ್ನು ನಾವು ತೆಗೆದುಕೊಳ್ಳಲೇಬೇಕು. ಏಕೆಂದರೆ ಇಂದು ಅಂಥ ಅನಿವಾರ್ಯವಾದಂಥ ಪರಿಸ್ಥಿತಿ ಇದೆ. ಈ ವಿಚಾರದಲ್ಲಿ ತಮ್ಮ ಮುಖಾಂತರ ಈ ಸದನದಲ್ಲಿರತಕ್ಕಂಥ ಎಲ್ಲಾ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ಈ ಬಗ್ಗೆ ನಾವೆಲ್ಲರೂ ಕೂಡ ಯುನಾನಿಮಸ್ ಆಗಿ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕಾಗುತ್ತದೆ. ಏಕೆಂದರೆ ಅಂಥ ಅನಿವಾರ್ಯವಾದಂಥ ಪರಿಸ್ಥಿತಿಗೆ ನಾವು ಮುಟ್ಟಿದ್ದೇವೆ. ನೀವು 20 ರಿಂದ 25 ಪರ್ಸೆಂಟ್ ಲೋಡ್ ಶೆಡ್ಡಿಂಗ್ ಎಂದು ಹೇಳಿದ್ದೀರಿ. ಆದರೆ ದುರಾದೃಷ್ಟವೆಂದು ನಾನು ನಿಮಗೆ ಹೇಳುತ್ತಿದ್ದೇನೆ. ನನಗೆ ಅಂಕಿ ಅಂಶಗಳನ್ನು ಮೊನ್ನೆ ನೀವೇ ಒದಗಿಸಿಕೊಟ್ಟಿದ್ದೀರಿ. 40 ರಿಂದ 50 ಪರ್ಸೆಂಟ್ ಲೋಡ್ ಶೆಡ್ಡಿಂಗ್ ಆಗುತ್ತಿದೆ. ಇವೊತ್ತಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಪವರ್ ಟ್ರೇಡಿಂಗ್, ಇವತ್ತು ಪವರ್ ಎಕ್ಸ್‌ಚೇಂಜ್ ಕಾರ್ಪೋರೇಶನ್ ಇದೆ, ಪವರ್ ಟ್ರೇಡಿಂಗ್ ಕೊರ್ಪೋರೇಷನ್ ಇದೆ, ಅವರು ಪವರ್ ಕೊಡುವುದಕ್ಕೆ ರೆಡಿಯಾಗಿದ್ದಾರೆ. ನೀವು ಅವರಿಗೆ ದುಡ್ಡನ್ನು ಕೊಡಬೇಕೆಷ್ಟೆ. ನೀವು ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಹಣವನ್ನು ಅವರಿಗೆ ಒದಗಿಸತಕ್ಕಂಥ ಕೆಲಸವನ್ನು ಒಂದು ಆದ್ಯತೆಯ ಕೆಲಸವೆಂದು ತಿಳಿದು ಆ ಕೆಲಸವನ್ನು ಮಾಡಿ ಪವರ್‌ಅನ್ನು ಒದಗಿಸತಕ್ಕಂಥ ಕೆಲಸವನ್ನು ನೀವು ಮಾಡಬೇಕು. ಏಕೆಂದರೆ ಪವರ್

ಇಲ್ಲವೆಂದು ಹೇಳಿಕೊಂಡು ಪವರ್ ಕಟ್ ಮಾಡುವುದಕ್ಕೆ ಕೈ ಹಾಕುವುದಕ್ಕೆ ಹೋಗಬೇಡಿ. ಏಕೆಂದರೆ ಇದನ್ನು ನಂಬಿಕೊಂಡಿರತಕ್ಕಂಥ ಕನ್ಸ್ಯೂಮರ್ಸ್‌ಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ದಯಮಾಡಿ ಈ ಕಡೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಎಲ್ಲಾ ಶಾಸಕರ ಕಳಕಳಿಯನ್ನು ಅರಿತು ಖಂಡಿತವಾಗಿ ಸರ್ಕಾರ ಅದಕ್ಕೆ ಸ್ಪಂದಿಸುತ್ತಿದೆ. ಈಗ ಇರುವ ಪರಿಸ್ಥಿತಿಯ ಬಗ್ಗೆಯೂ ಕೂಡ ನಿಮ್ಮ ಗಮನಕ್ಕೆ ತಂದಿದ್ದೇವೆ. ಇದರ ಜೊತೆಗೆ ನಾವು ಅಸಹಾಯಕರಲ್ಲ, ಕೈಕಟ್ಟಿಕೊಂಡು ಕುಳಿತಿಲ್ಲ. ಏನೇನು ಮಾಡಬೇಕೋ ಆ ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ಉದಾಹರಣೆಗೆ ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ನಾವು ಅಧಿಕಾರಕ್ಕೆ ಬರುವಂಥ ಸಂದರ್ಭಕ್ಕೆ ಒಂದು ದಿನಕ್ಕೂ ಆಗುವಷ್ಟು ಕೋಲ್ ಅಲ್ಲಿ ಇರಲಿಲ್ಲ. 7 ಯುನಿಟ್‌ಗಳಲ್ಲಿ ಕೇವಲ 5 ಯುನಿಟ್‌ಗಳು ಮಾತ್ರ ನಡೆಯುವಂಥ ಪರಿಸ್ಥಿತಿ ಅಲ್ಲಿತ್ತು. ಆ 5 ಯುನಿಟ್‌ಗಳು ಕೂಡ ಪೂರ್ಣ ಪ್ರಮಾಣದಲ್ಲಿ ನಡೆಯುವಂಥ ಅವಕಾಶಗಳಾಗುತ್ತಿರಲಿಲ್ಲ. ಅದಾದ ನಂತರ ಈಗ 7 ಯುನಿಟ್‌ಗಳಲ್ಲಿ ಒಂದು ಯುನಿಟ್ ಮಾತ್ರ ರಿಪೇರಿಗೆ ಬಂದು ಉಳಿದ 6 ಯುನಿಟ್‌ಗಳಲ್ಲಿ ಕೂಡ ಪೂರ್ಣ ಪ್ರಮಾಣದ ವಿದ್ಯುತ್ ಉತ್ಪಾದನೆಯನ್ನು ನಾವು ಈಗ ಮಾಡಿಸುತ್ತಿದ್ದೇವೆ. ಇದರ ಜೊತೆಗೆ ಈಗಾಗಲೇ 7 ದಿನಗಳಿಗೆ ಆಗುವಷ್ಟು ಕೋಲ್ ಅನ್ನು ನಾವು ಸ್ಟಾಕ್ ಇಟ್ಟುಕೊಂಡಿದ್ದೇವೆ. ಯಾವುದೇ ಕಾರಣಕ್ಕೂ ಕೂಡ ಆ ಒಂದು ವಿದ್ಯುತ್ ಘಟಕ ನಿಲ್ಲಬಾರದು. ಏಕೆಂದರೆ ಥರ್ಮಲ್ ಘಟಕ ಇವ್ಹೊತ್ತೇನಿದೆ ಅದೇ ನಮಗೆ ಹೆಚ್ಚಿನ ಶಕ್ತಿ. ಆದರಿಂದ ಉತ್ಪಾದನೆಗೆ ಯಾವುದೇ ಕಾರಣಕ್ಕೂ ತೊಂದರೆಯಾಗಬಾರದು ಎಂದು ಅಗತ್ಯ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕಾಗಿ ಕೋಲ್ ಸ್ಟಾಕ್ ಇಟ್ಟುಕೊಂಡಿದ್ದೇವೆ. ಇದಲ್ಲದೇ ಇಂಪೋರ್ಟೆಡ್ ಕೋಲ್ ಅನ್ನು ಎಂ.ಎಂ.ಟಿ.ಸಿ. ಮುಖಾಂತರ ತೆಗೆದುಕೊಳ್ಳಬೇಕೆಂದು ತೀರ್ಮಾನವನ್ನು ನಾವು ಮಾಡಿದ್ದೇವೆ. 6 ಲಕ್ಷ ಟನ್ ತೆಗೆದುಕೊಳ್ಳಬೇಕೆಂದು ಈಗಾಗಲೇ ನಾವು ತೀರ್ಮಾನವನ್ನು ತೆಗೆದುಕೊಂಡು ಆರ್ಡರ್ ಕೂಡ ಕೊಟ್ಟಿದ್ದೇವೆ. ಈ ತಿಂಗಳಿನಿಂದಲೇ ಅದೂ ಕೂಡ ಬರುವಂಥ ವ್ಯವಸ್ಥೆಗಳು ಆಗುತ್ತಿದೆ. ಇದಲ್ಲದೇ ಜಿಂದಾಲ್ ಕಂಪನಿಯಿಂದ, ಟಾಟಾ ಕಂಪನಿಯಿಂದ ಈಗಾಗಲೇ ಐವತ್ತೈವತ್ತು ಮೆಗಾವ್ಯಾಟ್‌ನಷ್ಟು ವಿದ್ಯುತ್‌ಗೆ ಬೇಕಾದಂಥ ಅಗ್ರಿಮೆಂಟ್‌ಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಇದರ ಜೊತೆಗೆ ಸನ್ಮಾನ್ಯ ಮುನಿಯಪ್ಪನವರು ತಿಳಿಸಿದಂತೆ ಈ ವವರ್ ಟ್ರೇಡಿಂಗ್ ಕಾರ್ಪೋರೇಶನ್‌ನಿಂದಲೂ ಕೂಡ ಈಗಾಗಲೇ

500 ಮೆಗಾವ್ಯಾಟ್ ವಿದ್ಯುತ್‌ಅನ್ನು ತೆಗೆದುಕೊಳ್ಳುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಇದಲ್ಲದೇ ಇನ್ನೂ ಎಲ್ಲೆಲಿಂದ ಪವರ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಆ ಬಗ್ಗೆ ಕೂಡ ಪ್ರಯತ್ನವನ್ನು ನಡೆಸುತ್ತಿದ್ದೇವೆ. ಇದರ ಜೊತೆಗೆ ತಾವು ಈಗಾಗಲೇ ಪ್ರಸ್ತಾಪ ಮಾಡಿದಂತೆ ಹಾಗೂ ಇನ್ನಿತರರು ಹೇಳಿದಂತೆ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಛತ್ತೀಸ್‌ಗಡ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದಾರೆ. ನಾಳೆ ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಂತ ಒಂದು ಅವಕಾಶಗಳಿವೆ. ಸುಮಾರು 200 ಮೆಗಾವ್ಯಾಟ್‌ನಿಂದ 300 ಮೆಗಾವ್ಯಾಟ್ ಬರುವಂಥ ಅವಕಾಶವಿದೆ. ಅಲ್ಲಿಯೂ ಕೂಡ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇವಿಷ್ಟೂ ಅಲ್ಲದೇ ಬಳ್ಳಾರಿ ವಿದ್ಯುತ್ ಘಟಕವೇನಿದೆ ಅದು ಕಳೆದ ವರ್ಷವೇ ಆರಂಭವಾಗಬೇಕಾಗಿತ್ತು. ಆದರೆ ಆರಂಭವಾಗಿರಲಿಲ್ಲ. ಈ ತಿಂಗಳು 28ನೇ ತಾರೀಖು ಅದರ ಉದ್ಘಾಟನೆಯನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಅದೂ ಕೂಡ ಉದ್ಘಾಟನೆಯಾಗುತ್ತದೆ. ಅದು 500 ಮೆಗಾವ್ಯಾಟ್‌ನದು. ಪ್ರಾರಂಭದಲ್ಲಿ 150 ರಿಂದ 200 ಮೆಗಾವ್ಯಾಟ್ ಉತ್ಪಾದನೆ ಮಾಡಿಕೊಂಡು ಅದರಿಂದಲೂ ಕೂಡ ಹೆಚ್ಚಿನ ವಿದ್ಯುತ್‌ಅನ್ನು ಪಡೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಇವಿಷ್ಟೂ ಅಲ್ಲದೇ, ಈಗೇನು ಅನೇಕ ವರ್ಷಗಳಿಂದ ಕೆಲವು ಸಂಸ್ಥೆಗಳಿಗೆ, ಬಯೋಮಾಸ್‌ಗೆ, ವಿಂಡ್ ಎನರ್ಜಿಗೆ, ಕೋ–ಜನರೇಶನ್‌ಗೆ ಕೆಲವು ಸಂಸ್ಥೆಗಳವರು ಪರ್ಮಿಶನ್ ತೆಗೆದುಕೊಂಡು, ಹಾಗೆಯೇ ಇಟ್ಟುಕೊಂಡಿದ್ದಾರೆ. ಕೆಲವರು ಆರಂಭ ಮಾಡುತ್ತಿದ್ದಾರೆ, ಕೆಲವರು ಆರಂಭ ಮಾಡುತ್ತಿಲ್ಲ. ವಿಂಡ್ ಎನರ್ಜಿ ಬಗ್ಗೆ ನಿಮಗೆ ಹೇಳಬೇಕೆಂದರೆ 9 ಸಾವಿರ ಮೆಗಾವ್ಯಾಟ್‌ನಷ್ಟು ಅವರಿಗೆ ಪರ್ಮಿಶನ್‌ಕೊಟ್ಟಾಗಿದೆ. ಆದರೆ ಅವರು ಉತ್ಪಾದನೆ ಮಾಡುತ್ತಿರುವುದು 900 ಮೆಗಾವ್ಯಾಟ್. ರೇವಣ್ಣನವರು ಇದನ್ನು ಗಮನಿಸಿರಬೇಕು. ಅದಕ್ಕಾಗಿಯೇ ನಾನು ಹೇಳುತ್ತಿರುವುದು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಯಾರ್ಯಾರು ಪ್ರಭಾವಿ ವ್ಯಕ್ತಿಗಳು ಇದರಲ್ಲಿ ಇದ್ದಾರೆ, ಏನು, ಎಂಥದ್ದು ಎಂಬ ಬಗ್ಗೆ ನಮ್ಮ ಸರ್ಕಾರ ಇವ್ಹೊತ್ತು ಗಮನಿಸುತ್ತಿದೆ. ಗಮನಿಸಿ ಯಾರು ಯಾರಿಗೆ ಪರ್ಮಿಶನ್ ಕೊಟ್ಟಿದ್ದೇವೆ, ಅದು ವಿಂಡ್ ಎನರ್ಜಿ ಇರಬಹುದು, ಮತ್ತೊಂದಿರಬಹುದು ಎಲ್ಲವನ್ನೂ ಗಮನಿಸುತ್ತಿದ್ದೇವೆ. ಇದಲ್ಲದೇ ಬಯೋಮಾಸ್‌ಗೆ ವಿಶೇಷವಾದ ಯೋಜನೆಯನ್ನು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಮಾನ್ಯ ನರೇಂದ್ರಬಾಬುರವರು ಏನು ಸಲಹೆಯನ್ನು ಕೊಟ್ಟು ಸೋಲಾರ್ ಎನರ್ಜಿ ಅಳವಡಿಸಿಕೊಂಡಿರುವವರಿಗೆ ವಿಶೇಷವಾದ ಸಬ್ಸಿಡಿ ಕೊಡಬೇಕೆಂದು

ಹೇಳಿದ್ದಾರೆ ಆ ಬಗ್ಗೆ ಕೂಡ ಯೋಚನೆಯನ್ನು ಮಾಡುತ್ತಿದ್ದೇವೆ. ಇವೊತ್ತು ಉತ್ಪಾದನೆ ಆಗುತ್ತಿರುವ ರಾಯಚೂರು ಉತ್ಪಾದನಾ ಘಟಕದ ಜೊತೆಗೆ ಬಳ್ಳಾರಿ ಉತ್ಪಾದನಾ ಘಟಕ ಕೂಡ ಆದಷ್ಟು ಬೇಗ ಆರಂಭ ಮಾಡಬೇಕು. ಈಗ ಕೋಲ್ ಸ್ಟಾಕ್ ಮಾಡಲು ನಮಗೆ ಯಾವುದೇ ಹಣದ ಕೊರತೆ ಇಲ್ಲ.

11:30 A.M.

ಕಲ್ಲಿದ್ದಲಿನ ಸ್ಟಾಕ್ ಬಗ್ಗೆ ಹೇಳುವುದಾದರೆ ಇದಕ್ಕೆ ಹಣದ ಕೊರತೆ ಇಲ್ಲ. ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಎಷ್ಟು ಹಣ ಬೇಕಾದರೂ ಕೊಡಲು ತಯಾರಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಹಣದ ಕೊರತೆಯಿಂದ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಕೊರತೆಯಾಗಲು ಸಾಧ್ಯವಿಲ್ಲ. ಇದು ಸರ್ಕಾರದ ಜವಾಬ್ದಾರಿ. ಇದರ ಜೊತೆಗೆ ಬಯೋಮಾಸ್, ವಿಂಡ್‌ಎನರ್ಜಿ ಇರಬಹುದು ಮತ್ತು ಇನ್ನು ಏನೇನನು ಹೊಸದಾಗಿ ಯೋಜನೆಯನ್ನು ತಯಾರು ಮಾಡಿಕೊಂಡು ಅದರ ಮೂಲಕ ಆದಷ್ಟು ಬೇಗ ವಿದ್ಯುತ್ ಉತ್ಪಾದನೆ ಮಾಡತಕ್ಕ ಕೆಲಸವನ್ನು ಮಾಡುತ್ತೇವೆ. ಏಕೆ ಈ ಹೇಳಿಕೆಯನ್ನು ಕೊಡುತ್ತಿದ್ದೇನೆಂದರೆ, ಕೈಗಾರಿಕೆಗಳು ಇರಬಹುದು, ರೈತರ ಬಗ್ಗೆ ಇರಬಹುದು, ಕಮರ್ಷಿಯಲ್ ಇರಬಹುದು, ಗೃಹಬಳಕೆಯದ್ದು ಇರಬಹುದು, ರಾಜ್ಯದ ಈಗಿನ ಪರಿಸ್ಥಿತಿಯನ್ನು ತಿಳಿಸಿ ನಾವು ನಿಸ್ಸಹಾಯಕರಾಗಿ ಕೂರಲು ತಯಾರಾಗಿಲ್ಲ. ನಾವು ಏನೇನು ಪ್ರಯತ್ನಗಳು ಇದೆಯೊ ಅವೆಲ್ಲವನ್ನು ಮಾಡುತ್ತೇವೆ. ಇದರ ಜೊತೆಗೆ ನಾವು ಮಳೆಯ ನಿರೀಕ್ಷೆಯಲ್ಲೂ ಇದ್ದೇವೆ. ಅತಿ ಹೆಚ್ಚು ಮಳೆ ಬಂತು ಎಂದರೆ 24 ಗಂಟೆಗಳೂ ವಿದ್ಯುತ್‌ಅನ್ನು ಕೊಡಬೇಕೆಂಬ ಯೋಚನೆ ಸರ್ಕಾರಕ್ಕೆ ಇದೆ. ಅದು ಕಮರ್ಷಿಯಲ್, ಡೊಮ್ಯಾಸ್ಟಿಕ್ Industrial purpose ಇರಬಹುದು. ಉಚಿತವಾಗಿ ವಿದ್ಯುತ್ ಕೊಡುವ ಬಗ್ಗೆ ನಾವೇನು ಪ್ರಸ್ತಾಪ ಮಾಡಿದ್ದೇವೆ ಅದರ ಬಗ್ಗೆ ಮಳೆಯನ್ನು ನೋಡಿಕೊಂಡು, ವಿದ್ಯುತ್ ಹೆಚ್ಚಾಗಿ ಹೇಗೆ ಬರುತ್ತದೆ ಎಂಬುದನ್ನು ನೋಡಿಕೊಂಡು, ಆದರೂ ಅದನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ

ಶ್ರೀ ಆರ್ ರೋಷನ್‌ಬೇಗ್ : ಅವರು ಮಾತನಾಡುತ್ತಾ ಪ್ರಭಾವಿ ಶಕ್ತಿಗಳು, ವಿಂಡ್‌ಎನರ್ಜಿ ಮುಂತಾಗಿ ಹೇಳಿದರು. ಹಾಗೆಂದರೆ ಏನು? ನನಗೆ ಅದು ಅರ್ಥವಾಗಲಿಲ್ಲ. ಅದರ ಬಗ್ಗೆ ಸ್ವಲ್ಪ ಹೇಳಿ. ವಿಂಡ್ ಎನರ್ಜಿಗೂ ಪ್ರಭಾವಿ ಶಕ್ತಿಗಳಿಗೂ ಏನು ಸಂಬಂಧ?

ಶ್ರೀ ಕೆ.ಎಸ್. ಈಶ್ವರಪ್ಪ : ತಮಗೆ ಅದು ಗೊತ್ತಿದ್ದೂ ಗೊತ್ತಿಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ತಾವು ಬಯೋಮಾಸ್ ಅದು ಇದು ಎಂದು ಎಲ್ಲದರ ಬಗ್ಗೆ ಹೇಳುತ್ತಿದ್ದಿರಲ್ಲಾ ಅವೆಲ್ಲಾ ಮುಂದೆ ಆಗತಕ್ಕದ್ದು. ಅದು immediate ಆಗಿ ಅಲ್ಲ. ತಣ್ಣೀರ್‌ಬಾವಿಯ 200 ಮೆಗಾ ವ್ಯಾಟ್ ನಿಮ್ಮ ಕೈತಪ್ಪಿಹೋಗಿದೆ. ಅದನ್ನು balance ಮಾಡಬೇಕಾಗಿರುವಾಗ immediate ಆಗಿ ಬಳ್ಳಾರಿಯದ್ದನ್ನು ಪ್ರಾರಂಭ ಮಾಡಿ. ಆಗ ಮಾತ್ರ ಅದು ಸಾಧ್ಯವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಬಳ್ಳಾರಿಯದನ್ನು 28ನೇ ತಾರೀಖು ಪ್ರಾರಂಭ ಮಾಡುತ್ತಿದ್ದೇವೆಂದು ದಿನಾಂಕವನ್ನೂ ಪ್ರಕಟಣೆ ಮಾಡಿದೆ. ಅದಕ್ಕಿಂತ ಬೇರೆ ಏನನ್ನು ಹೇಳಲಿ?

ಶ್ರೀ ಟಿ.ಬಿ. ಜಯಚಂದ್ರ : ಹೋಗಲಿ, ಈಗ ಕಲ್ಲಿದ್ದಲು ಎಷ್ಟು ಸ್ಟಾಕ್ ಇದೆ? That is what I am telling ನೀವು inauguration ಯಾವತ್ತಾದರೂ ಮಾಡಿಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಕಲ್ಲಿದ್ದಲಿನ ಸಮಸ್ಯೆಯನ್ನು ಇಟ್ಟುಕೊಂಡು ಯಾವುದೇ ಯೂನಿಟ್‌ಅನ್ನು ನಿಲ್ಲಿಸಲು ಬಿಡುವುದಿಲ್ಲ. ಇದನ್ನು ತುಂಬಾ ಸ್ಪಷ್ಟಮಾಡಲು ಇಷ್ಟಪಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಇಂಧನ ಸಚಿವರು 2 ಹೇಳಿಕೆಯನ್ನು ಕೊಟ್ಟಿದ್ದಾರೆ. ಒಂದು ಹಿಂದಿನ ಸರ್ಕಾರದವರು ಸುಮಾರು ವಿಂಡ್ ಎನರ್ಜಿಗೆ ಅವಕಾಶ ಕೊಟ್ಟಿದ್ದಾರೆಂದು, ಪ್ರಭಾವಿ ಶಕ್ತಿಗಳು ಎಂದು ಹೇಳಿದ್ದಾರೆ. ನಾನು ಅಂದು ಮಾಡಿರುವ ಆದೇಶವನ್ನು ತೆಗೆದು ನೋಡಿ. ಅದು ಏನೆಂದರೆ ಯಾರಾದರೂ ಅನುಮತಿ ತೆಗೆದುಕೊಂಡು ಒಂದು ವರ್ಷದಲ್ಲಿ ಮಾಡದಿದ್ದರೆ ಅವರು ಎಂಥ ಪ್ರಭಾವಿಯಾಗಿದ್ದರೂ ರದ್ದು ಮಾಡಬೇಕೆಂದು ನಾನು ಆದೇಶ ಮಾಡಿದ್ದೇನೆ. ಅದನ್ನು ಮಾಡಲು ತಾವೇನಾದರೂ ಹಿಂದು ಮುಂದು ನೋಡುತ್ತೀರಾ? ಎರಡನೆಯದು, ಕಲ್ಲಿದ್ದಲಿನ ಕಾರಣ ಎಂದು ಹೇಳುತ್ತೀರಿ. 6 ತಿಂಗಳು ರಾಜ್ಯಪಾಲರ ಆಡಳಿತ ಇತ್ತು. ನನ್ನ ಕಾಲದಲ್ಲಿ ಏನಾದರು ಅಂಥದ್ದು ಇತ್ತೇ? ಅಥವಾ ಅದು ರಾಜ್ಯಪಾಲರ ಕಾಲದಲ್ಲಿ ಇತ್ತೇ ಎಂಬುದನ್ನು ತಾವು ತಿಳಿಸಬೇಕು. ಮೂರನೆಯದು, ಇಲ್ಲಿ ಕಾರಣ ಏನಿದೆ ಅದರಲ್ಲಿ ರಾಜಕೀಯ ಬೆರೆಸಲು ಹೋಗಬಾರದು. ಮಾನ್ಯ ಮುನಿಯಪ್ಪನವರು ಸರ್ವಾನುಮತದಿಂದ ಒಂದು ನಿರ್ಣಯವನ್ನು ಮಾಡಿದ್ದಾರೆಂದು ಹೇಳಿದರು. ಆಂಧ್ರದಲ್ಲಿ ಕೇಂದ್ರ ಸರ್ಕಾರದಿಂದ 2900 ಮೆಗಾವ್ಯಾಟ್‌ನ ಒಂದು

ಯೂನಿಟ್‌ಅನ್ನು ಹಾಕಿದರು. ಅದನ್ನು ಎನ್.ಡಿ.ಎ. ಸರ್ಕಾರದಲ್ಲಿ ರಾಜಕೀಯ ಪ್ರಭಾವದಿಂದಲೇ ಅಲ್ಲಿ ಹಾಕಿದ್ದು ಎಂಬುದನ್ನು ತಾವು ಅರಿತುಕೊಳ್ಳಬೇಕು. ನಮ್ಮಲ್ಲೂ ಅದೇ ರೀತಿ ಹಾಕಲು ನಾನು ಹಲವಾರು ಸಲ ಕೇಂದ್ರ ಸರ್ಕಾರವನ್ನು ಕೇಳಿದ್ದೇನೆ. ಕೇಂದ್ರದ ಯು.ಪಿ.ಎ. ಸರ್ಕಾರವನ್ನು ಒಪ್ಪಿಸಿ ಮೂರು ಸಾವಿರ ಮೆಗಾವ್ಯಾಟ್ ಯೂನಿಟ್‌ಅನ್ನು ಹಾಕಲು ಅವರು ಒಪ್ಪಿಗೆ ಕೊಟ್ಟಿದ್ದರು. ಅದಕ್ಕೆ ನಮ್ಮ ರಾಜ್ಯದಲ್ಲಿ ತಮಗೆ ಗೊತ್ತಿದೆ, ಉತ್ತರ ಕರ್ನಾಟಕ ಇರಬಹುದು ಎಲ್ಲೇ ಇರಬಹುದು, ಇವತ್ತು ಅದನ್ನು ಹಾಕಲು ಕೇಂದ್ರ ಸರ್ಕಾರ ತಯಾರಿದೆ. ಏಕೆಂದರೆ ಇನ್ನೊಂದು ಸರ್ಕಾರದ ಮೇಲೆ ಅಪಾದನೆ ಮಾಡುವುದು ಸರಿಯಲ್ಲವೆಂಬುದನ್ನು ನಮ್ಮ ಇಂಧನ ಸಚಿವರ ಗಮನಕ್ಕೆ ತರುತ್ತೇನೆ. ಆದರೆ ಅಲೊಕೇಷನ್ ಕೊಡುವಾಗ ಸರಿಯಾದ ರೀತಿಯಲ್ಲಿ ಕೊಟ್ಟಿಲ್ಲ ಎಂಬುದನ್ನು ಘಂಟಾಘೋಷವಾಗಿ ಹೇಳಬೇಕಾಗುತ್ತದೆ. ಅದನ್ನು ಈಗ ಇರುವ ಯು.ಪಿ.ಎ. ಸರ್ಕಾರವಾದರೂ ಮಾಡಲಿ. ಹಿಂದೆ ಎನ್.ಡಿ.ಎ. ಸರ್ಕಾರ ಮಾಡಿರುವ ತಪ್ಪನ್ನು ಈಗ ಇರುವ ಯು.ಪಿ.ಎ. ಸರ್ಕಾರ ಸರಿಪಡಿಸಿಕೊಳ್ಳಲಿ ಎಂದು ಹೇಳ ಬಯಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟರಾಜು : ಮಾನ್ಯ ಸಚಿವರು ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ 20–25 ಭಾಗ ವಿದ್ಯುತ್ ಲೋಡ್‌ಶೆಡ್ಡಿಂಗ್ ಮಾಡುತ್ತೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದ ರೈತರಿಗೆ ನಾವು ಎಷ್ಟು ಗಂಟೆ 3 ಪೇಸ್ ಮತ್ತು ಸಿಂಗಲ್ ಪೇಸ್‌ನಲ್ಲಿ ವಿದ್ಯುತ್‌ಅನ್ನು ಕೊಡುತ್ತೇವೆಂದು ಈ ಸದನದಲ್ಲಿ ರೈತರಿಗೆ ಒಂದು ಸಂದೇಶವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ರೇವಣ್ಣನವರ ಕಾಲದಲ್ಲಿ ಆಗಿದೆ ಎಂದು ನಾನು ಹೇಳಲಿಲ್ಲ. ಹಿಂದೆ ಆಗಿದೆ ಎಂದು ಹೇಳಿದ್ದೇನೆ. 9 ಸಾವಿರ ಮೆಗಾವ್ಯಾಟ್‌ಗೆ ಇವರ ಅವಧಿಯಲ್ಲೇ ಕೊಟ್ಟಿದ್ದಾರೆ, ಇವರ ಅವಧಿಯಲ್ಲೇ ಪ್ರಭಾವಿ ವ್ಯಕ್ತಿಗಳು ಅದನ್ನು ನಡೆಸಿಲ್ಲ ಎಂಬುದನ್ನು ಹೇಳಿಲ್ಲ. ಹಿಂದಿನ ಸರ್ಕಾರಗಳು ಎಂದು ಹೇಳಿದ್ದೇನಷ್ಟೆ. ಅದರ ಬಗ್ಗೆ ಒಂದು ವರ್ಷದಲ್ಲಿ ಏನು ಅವರು ಉತ್ಪಾದನೆ ಮಾಡದಿದ್ದರೆ ರದ್ದುಮಾಡಬೇಕೆಂದು ಇವರು ಆದೇಶ ಹೊರಡಿಸಿದ್ದಾರೆ ಅ ದಿಕ್ಕಿನಲ್ಲಿ ಖಂಡಿತವಾಗಿ ಸರ್ಕಾರ ಮುಂದುವರೆಯುತ್ತದೆ. ಎರಡನೆಯದಾಗಿ ಅವರೇನು ಕಲ್ಲಿದ್ದಲಿನ ಬಗ್ಗೆ ಹೇಳಿದ್ದಾರೆ ಅದನ್ನು ಕೂಡ ನಾನು ನಿಮ್ಮ ಅವಧಿಯದ್ದು ಎಂದು ಹೇಳಿಲ್ಲ. 6 ತಿಂಗಳ ಹಿಂದಿನಿಂದ ಈ ಸಮಸ್ಯೆ ಬಂದಿದೆ. ನಮ್ಮ ಸರ್ಕಾರ ಜವಾಬ್ದಾರಿ ತೆಗೆದುಕೊಂಡಾಗ ಇದ್ದ ಪರಿಸ್ಥಿತಿಯನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ಕಲ್ಲಿದ್ದಲಿನ ಸಮಸ್ಯೆ ಇಲ್ಲದಿರುವಂತೆ ನಾವು ನೋಡಿಕೊಳ್ಳುತ್ತಿದ್ದೇವೆ. ಮಾನ್ಯ ಶಾಸಕರು

ಹೇಳಿದಂತೆ, ರೈತರ ಬಗ್ಗೆ ಸಹ ತುಂಬಾ ಸ್ಪಷ್ಟವಾಗಿ ಹೇಳಲು ಇಷ್ಟಪಡುತ್ತಿದ್ದೇನೆ, ವಿದ್ಯುತ್‌ನ ಅವೇಲಬಲಿಟಿಯನ್ನು ನೋಡಿಕೊಂಡು ಆದ್ಯತೆ ಮೇಲೆ ರೈತರಿಗೆ ಹೆಚ್ಚಿನ ವಿದ್ಯುತ್‌ಅನ್ನು ಕೊಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಿರ್ದಿಷ್ಟವಾಗಿ ಸಮಯವನ್ನು ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ, ಇದರ ಬಗ್ಗೆ ಈಗ ಸಾಕು. ಮತ್ತೆ ಬೇರೆ ರೂಪದಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ರೇವಣ್ಣನವರೆ ತಾವು ಪ್ರಶ್ನೆ ಕೇಳಿ. ಅವರು ಈಗಾಗಲೇ ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಮತ್ತೆ ಇದರ ಬಗ್ಗೆ ಚರ್ಚೆ ಬೇಡ. ನೀವು ಬೇರೆ ರೂಪದಲ್ಲಿ ನೋಟೀಸ್‌ಅನ್ನು ಕೊಟ್ಟರೆ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಒಂದು ಸಲ statement ಕೊಟ್ಟಮೇಲೆ ಸಾಕಷ್ಟು ಕ್ಲಾರಿಫಿಕೇಷನ್ ಕೇಳಿ ಆಗಿದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ. ರೇವಣ್ಣನವರೆ ತಾವು ಪ್ರಶ್ನೆ ಕೇಳಿ.

(ಗೊಂದಲ)

ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಈ ಸ್ಟೇಟ್‌ಮೆಂಟ್ ಮೇಲೆ ಮತ್ತೆ ಚರ್ಚೆ ಮಾಡಲು ನಾನು ಅವಕಾಶ ಕೊಡುವುದಿಲ್ಲ. ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ. ರೇವಣ್ಣನವರೇ ಈಗ ಪ್ರಶ್ನೋತ್ತರ ಪ್ರಾರಂಭವಾಗಿದೆ, ನೀವು ಕೇಳುತ್ತೀರೋ ಇಲ್ಲವೋ? ತಾವು ದಯಮಾಡಿ ಪ್ರಶ್ನೆ ಕೇಳಿ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ನೀವು ಬೇರೆ ರೂಪದಲ್ಲಿ ನೋಟೀಸ್ ಕೊಡಿ. ಅನಂತರ ನಾನು ಖಂಡಿತವಾಗಿ ಚರ್ಚೆಗೆ ಅವಕಾಶ ಕೊಡುತ್ತೇನೆ. ಇದು ಚರ್ಚೆಗೆ ಬಂದಿಲ್ಲ. ಅವರು ಮಾಡಿರುವ ಸ್ಟೇಟ್‌ಮೆಂಟ್ ಮೇಲೆ ಕೇವಲ ಕ್ಲಾರಿಫಿಕೇಷನ್ ಕೇಳಬೇಕು. ಆದ್ದರಿಂದ ನೀವು ಬೇರೆ ರೂಪದಲ್ಲಿ ಇದರ ಬಗ್ಗೆ ನೋಟೀಸ್ ಕೊಡಿ ನಾನು ಖಂಡಿತವಾಗಿ ಚರ್ಚೆಗೆ ಅವಕಾಶ ಕೊಡುತ್ತೇನೆ. ಇಂದು ವಿದ್ಯುತ್‌ನ ಬಗ್ಗೆ ಮೂರು ಪ್ರಶ್ನೆಗಳು ಇದೆ. ಆ ಸಂದರ್ಭದಲ್ಲಿ ನೀವು ಮತ್ತೆ ಕ್ಲಾರಿಫಿಕೇಷನ್ಸ್ ಕೇಳಬಹುದು. ಮಾನ್ಯ ರೇವಣ್ಣನವರು ದಯಮಾಡಿ ಪ್ರಶ್ನೆಯನ್ನು ಕೇಳಿ.